## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಕುಮಾರಿ ಖಮರ್ ಬೇಗಂ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಮಿಟ್ಟಿಮಲ್ಕಾಪುರ ಗ್ರಾಮ ಪಂಚಾಯತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ ಹೊರಡಿಸುವ ಕುರಿತು - ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/76/ಗ್ರಾಪಂಕಾ/2011, ದಿನಾಂಕ: 30-04-2011.
2. ಅಪರ ನಿಬಂಧಕರು ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK/ARE-4/14-A/ENQ-64/2011, ದಿನಾಂಕ: 20-06-2015.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK/ARE-4/ENQ-64/2011, ದಿನಾಂಕ: 14-07-2015.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ/345/ಗ್ರಾಪಂಕಾ/2015, ದಿನಾಂಕ: 27-07-2015.
5. ಕುಮಾರಿ ಖಮರ್ ಬೇಗಂ ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:13-02-2017.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕುಮಾರಿ ಖಮರ್ ಬೇಗಂ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಮಿಟ್ಟಿಮಲ್ಕಾಪುರ ಗ್ರಾಮ ಪಂಚಾಯತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11(9)ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

"ದೋಷಾರೋಪಣೆ":

"ಕುಮಾರಿ ಖಮರ್ ಬೇಗಂ, ಇವರು ಗ್ರಾಮ ಪಂಚಾಯತಿ ಕಾರ್ಯದರ್ಶಿಯಾಗಿ ಮಿಟ್ಟಿಮಲ್ಕಾಪುರ ಗ್ರಾಮ ಪಂಚಾಯತಿ, ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಸ್ವಸಹಾಯ ಯೋಜನೆ ಅಡಿಯಲ್ಲಿ ಅಂಗಡಿಗಳನ್ನು ನಡೆಸಲು ದೂರುದಾರರಾದ ಶ್ರೀ ಈರಣ್ಣಾ ಇವರ ಪತ್ನಿ ಶ್ರೀಮತಿ ಈರಮ್ಮ ಮತ್ತು ಮತ್ತೊಬ್ಬರಾದ ಶ್ರೀ ಚಿನ್ನಯ್ಯ ಇವರುಗಳಿಗೆ ಸಬ್ಸಿಡಿ ಮೊತ್ತದ ಚೆಕ್ ನೀಡಲು ಅವರಿಂದ ತಲಾ ರೂ. 2,000/- ರಂತೆ ಒಟ್ಟು ರೂ. 4,000/- ಲಂಚದ ಹಣಕ್ಕೆ ಒತ್ತಾಯಿಸಿ ದಿನಾಂಕ: 19-10-2005 ರಂದು

ಅದನ್ನು ಸ್ವೀಕರಿಸಿ ಸರ್ಕಾರಿ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ನಿಷ್ಠೆ ತೋರದೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಸದರಿಯವರು ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಮ 1966 ರ ನಿಯಮ 3(1) (i) ರಿಂದ (iii) ಅನ್ವಯ ದುರ್ನಡತೆ ಎಸಗಿರುತ್ತಾರೆ."

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ ಕುಮಾರಿ ಖಮರ್ ಬೇಗಂ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಮಿಟ್ಟಿಲ್ಕಾಪುರ ಗ್ರಾಮ ಪಂಚಾಯತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರು ಅಂಗೀಕರಿಸಿ ಕುಮಾರಿ ಖಮರ್ ಬೇಗಂ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(vi) ರ ಅನ್ವಯ ಅವರಿಗೆ "ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ" ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಕುಮಾರಿ ಖಮರ್ ಬೇಗಂ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (4) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಅವರು ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ನಾನು ಕಾರ್ಯದರ್ಶಿಯಾಗಿದ್ದು, ಚೆಕ್‌ಗಳನ್ನು ನೀಡುವ ಅಧಿಕಾರವನ್ನು ಹೊಂದಿರುವುದಿಲ್ಲ. ನಾನು ಮನೆಯ ಹೊರಗಡೆ ಇದ್ದಾಗ ದೂರುದಾರರು ಮನೆಯೊಳಗೆ ಪ್ರವೇಶಿಸಿದ್ದು, ಅಲ್ಲಿ ಏನು ಮಾಡಿರುತ್ತಾರೆ ಎಂದು ನಾನು ಗಮನಿಸಿರುವುದಿಲ್ಲ. ದುರುದ್ದೇಶಪೂರ್ವಕವಾಗಿ ಗ್ರಾಮ ಪಂಚಾಯತಿಯ ಸದಸ್ಯರು ಹಾಗೂ ಅಧ್ಯಕ್ಷರು ನನ್ನ ವಿರುದ್ಧ ಸಂಚು ರೂಪಿಸಿ ಲೋಕಾಯುಕ್ತ ಪೋಲಿಸರ ಮೂಲಕ ನನ್ನ ವಿರುದ್ಧ ಲಂಚ ಸ್ವೀಕಾರದ ಆರೋಪವನ್ನು ಹೋರಿಸಿರುತ್ತಾರೆ. ದೂರುದಾರರಾದ ಈರಣ್ಣ ಮತ್ತು ಚಿನ್ನಯ್ಯ ರವರ ಯಾವುದೇ ಕೆಲಸವು ನನ್ನ ಬಳಿ ಬಾಕಿಯಿರಲಿಲ್ಲ. ನಾನು ಯಾರಿಂದಲೂ ರೂ.4000/- ಗಳನ್ನು ಅಕ್ರಮ ಸಂಭಾವನೆಯಾಗಿ ಕೋರಿರುವುದಿಲ್ಲ. ಆದಾಗ್ಯೂ ತನಿಖಾಧಿಕಾರಿಗಳು ದೂರಿನ ಬಗ್ಗೆ ನನ್ನ ಬಳಿ ಪ್ರಸ್ತಾಪಿಸಿ ನಾನು ಅಕ್ರಮ ಸಂಭಾವನೆ ಪಡೆದಿರುವುದಾಗಿ ದೂರು ದಾಖಲಿಸಿಕೊಂಡಿರುತ್ತಾರೆ. ಹಾಗೂ ನನ್ನ ವಿರುದ್ಧ ವಿಶೇಷ ಕ್ರಿಮಿನಲ್ ಕೇಸ್ ನಂ.1/2006 ರನ್ನು ದಾಖಲಿಸಿರುತ್ತಾರೆ.

ಮೇಲ್ಕಂಡ ಎಲ್ಲ ವಿವರವಾದ ಅಂಶಗಳನ್ನು ಲೋಕಾಯುಕ್ತ ವಿಚಾರಣಾಧಿಕಾರಿಗಳು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. ನನ್ನ ಲಿಖಿತ ಹೇಳಿಕೆಯ ಅಂಶಗಳನ್ನು ಸಹ ಪರಿಗಣಿಸದೇ ನನ್ನ ಮೇಲಿನ ಆರೋಪವು ಸಾಬೀತಾಗಿರುವುದಾಗಿ ಅಭಿಪ್ರಾಯಪಟ್ಟಿರುತ್ತಾರೆ. ಹಾಗೂ ನನ್ನ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಇದು ನ್ಯಾಯಸಮ್ಮತವಾಗಿರುವುದಿಲ್ಲ. ಹಾಗೂ ಶಿಫಾರಸ್ಸನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸುತ್ತೇನೆ" ಎಂದು ಹೇಳಿಕೆಯಲ್ಲಿ ಕೋರಿರುತ್ತಾರೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ ಕುಮಾರಿ ಖಮರ್ ಬೇಗಂ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಮಿಟ್ಟಿಲ್ಕಾಪುರ ಗ್ರಾಮ ಪಂಚಾಯತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(vi)ರ ಅನ್ವಯ ಅವರಿಗೆ "ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ" ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ. ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತದೆ. ಆದುದರಿಂದ ಕುಮಾರಿ ಖಮರ್ ಬೇಗಂ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುತ್ತದೆ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ ಕುಮಾರಿ ಖಮರ್ ಬೇಗಂ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಮಿಟ್ಟಿಲ್ಕಾಪುರ ಗ್ರಾಮ ಪಂಚಾಯತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(vi)ರ ಅನ್ವಯ **"ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ"** ದಂಡನೆ ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/350/ಗ್ರಾಪಂಕಾ/2017, ಬೆಂಗಳೂರು, ದಿನಾಂಕ:11-10-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಕುಮಾರಿ ಖಮರ್ ಬೇಗಂ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಮಿಟ್ಟಿಲ್ಕಾಪುರ ಗ್ರಾಮ ಪಂಚಾಯತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(vi) ರ ಅನ್ವಯ **"ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಲೋಕಾಯುಕ್ತರು, ಕರ್ನಾಟಕ ಉಪಲೋಕಾಯುಕ್ತ, ಬೆಂಗಳೂರು.

3.ಅಪರ ನಿಬಂಧಕರು, ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

4.ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

5.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಯಚೂರು ಜಿಲ್ಲೆ.

6.ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ರಾಯಚೂರು, ರಾಯಚೂರು ಜಿಲ್ಲೆ.

7.ಕುಮಾರಿ ಖಮರ್ ಬೇಗಂ, ಹಿಂದಿನ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಮಿಟ್ಟಿಲ್ಕಾಪುರ ಗ್ರಾಮ ಪಂಚಾಯತಿ, ರಾಯಚೂರು ತಾಲ್ಲೂಕು, ರಾಯಚೂರು ಜಿಲ್ಲೆ.

8.ಗಣಕ ಕೋಶ

9.ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.